# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 | ENGLISH DAILY | Subscription Yearly - Rs. - | TUESDAY | 13-6-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ದೇಶೀ ಕಚ್ಚಾ ಗೋಡಂಬಿ ಸೀಸನ್ ಅಂತ್ಯ

ಮಳೆ ಆರಂಭವಾಗುವುದರೊಂದಿಗೆ ದೇಶೀ ಕಚ್ಚಾ ಗೋಡಂಬಿ ಸೀಸನ್ ಅಂತ್ಯವಾಗುವುದರಲ್ಲದೆ, ಈ ವರ್ಷ ಕಚ್ಚಾ ಗೋಡಂಬಿ ದರವೂ ಹಿಂದಿನ ಸೀಸನ್‌ಗೆ ಹೋಲಿಸಿದರೆ ಕಡಿಮೆಯಿದೆ. ದೇಶೀ ಸಂಸ್ಕರಣೆಗೆ ಸಾಕಷ್ಟು ಕಚ್ಚಾ ಗೋಡಂಬಿ ಲಭ್ಯವಾಗದಿರುವುದರಿಂದ ಆಮದು ಕಚ್ಚಾ ಗೋಡಂಬಿಯನ್ನು ಅವಲಂಭಿಸಬೇಕಾಗಿದೆ. ಕಚ್ಚಾ ಗೋಡಂಬಿ ಬೆಳೆಯುವ ಆಫ್ರಿಕಾ ಮುಂತಾದ ದೇಶಗಳಲ್ಲಿ ಸ್ಥಳೀಯ ಸಂಸ್ಕರಣೆಗೆ ಆಧ್ಯತೆ ನೀಡುತ್ತಿರುವುದರಿಂದ ಹಾಗೂ ವಿಯೆಟ್ನಾಂ ನಂತಹ ಸಂಸ್ಕರಣೆಗೆದಾರ ದೇಶಗಳಿಂದಲೂ ಕಚ್ಚಾ ಗೋಡಂಬಿಗೆ ಬೇಡಿಕೆಯಿದ್ದು ಮುಂದಿನ ದಿನಗಳಲ್ಲಿ ದರ ಹೆಚ್ಚಳವಾಗುವ ಸಾಧ್ಯತೆಗಳಿವೆ. ಆಮದು ಕಚ್ಚಾ ಗೋಡಂಬಿ ದರ ಹೆಚ್ಚಳವಾದಲ್ಲಿ ಭಾರತೀಯ ಸಂಸ್ಕರಣೆದಾರರ ಉತ್ಪಾದನಾ ವೆಚ್ಚ ಹೆಚ್ಚಳವಾಗುವ ಸಾಧ್ಯತೆಗಳಿವೆ.

## ಪಾಮೆಣ್ಣೆ ಫ್ಯೂಚರ್ ದರ ಇಳಿಕೆ

ದಾಸ್ತಾನು, ಉತ್ಪಾದನೆ ಹೆಚ್ಚಳದಿಂದ ಹಾಗೂ ಜೂನ್ 1–10 ರ ತನಕದ ಅವಧಿಯಲ್ಲಿ ರಫ್ತು ಇಳಿಕೆಯಿಂದಾಗಿ ಮಲೇಶೀಯಾ ಪಾಮೆಣ್ಣೆ ಫ್ಯೂಚರ್ ದರ ಇಳಿಕೆ ಕಂಡಿದೆ.

## ಪೌಲ್ಟ್ರಿ ಚಿಕನ್ ದರ ಹೆಚ್ಚಳ

ತಮಿಳುನಾಡು ಕರಾವಳಿಯಲ್ಲಿ ಎಪ್ರಿಲ್ 15 ರಿಂದ ನಾಳೆಯ (ಬುಧವಾರ) ತನಕ 61 ದಿನಗಳ ಸಾಗರ ಮೀನುಗಾರಿಕೆಗೆ ನಿರ್ಬಂಧವಿದೆಯೆನ್ನಲಾಗಿದೆ. ಈ ಸಮಯದಲ್ಲಿ ಮೀನು ಸಂತತಿ ಅಭಿವೃದ್ಧಿಗಾಗಿ ಪ್ರತೀ ವರ್ಷ ಮೀನುಗಾರಿಕೆಗೆ ನಿರ್ಬಂಧವಿರುತ್ತದೆಯೆನ್ನಲಾಗಿದೆ. ಇದರಿಂದ ತಮಿಳುನಾಡಿನಾದ್ಯಂತ ಮೀನು ಲಭ್ಯತೆಗೆ ಕೇರಳ ಹಾಗೂ ಕರ್ನಾಟಕ ಮತ್ತಿತರ ರಾಜ್ಯಗಳನ್ನು ಅವಲಂಭಿಸಬೇಕಾಗಿರುವುದರಿಂದ ಮೀನಿನ ಲಭ್ಯತೆ ಕಡಿಮೆಯಾಗಿ ದರವೂ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಹಾಗೂ ಆಡಿನ ಮತ್ತಿತರ ಮಾಂಸಗಳ ಬೆಲೆಯೂ ದುಬಾರಿಯಿರುವುದರಿಂದ ಮಾಂಸಹಾರಿಗಳು ಚಿಕನ್ ಬಳಕೆಗೆ ಹೆಚ್ಚು ತೊಡಗಿರುವುದರಿಂದ ಹಿಂದಿನ ಕೆಲವು ಸಮಯಗಳಿಂದ ಚಿಕನ್, ಬ್ರಾಯಿಲರ್ ದರಗಳು ಗಣನೀಯ ಹೆಚ್ಚಳವಾಗಿದೆಯೆನ್ನಲಾಗಿದೆ. ಬೇಸಿಗೆಯಲ್ಲಿ ಸಹಜವಾಗಿ ಚಿಕನ್ ಉತ್ಪಾದನೆ ಕಡಿಮೆಯಾಗುತ್ತದೆಯೆನ್ನಲಾಗಿದೆ. ಇದರಿಂದ ದೇಶೀ ಮಾರುಕಟ್ಟೆಗಳಲ್ಲಿ ಚಿಕನ್ ಮೀಟ್ ದರ ಬಹಳ ಹೆಚ್ಚಳ, ಅಲ್ಲದೆ ಆಂಧ್ರಪ್ರದೇಶದಲ್ಲಿ ಬಿಸಿಗಾಳಿ, ಉಷ್ಣತೆಗೆ ಗಣನೀಯ ಸಂಖ್ಯೆಯಲ್ಲಿ ಚಿಕನ್‌ಗಳು ನಾಶವಾಗಿದೆಯೆನ್ನಲಾಗಿದೆ. ನಿರ್ಬಂಧ ಕೊನೆಗೊಂಡ ನಂತರ ಮೀನುಗಾರಿಕೆ ಮತ್ತೆ ಆರಂಭವಾಗಿ ಮೀನು ಲಭ್ಯತೆ ಹೆಚ್ಚಳವಾದಲ್ಲಿ ಹಾಗೂ ಮುಂಗಾರು ಪ್ರಾರಂಭವಾಗಿ ಚಿಕನ್ ಉತ್ಪಾದನೆಯೂ ಹೆಚ್ಚಳವಾದಲ್ಲಿ, ಮುಂದಿನ ದಿನಗಳಲ್ಲಿ ಚಿಕನ್ ದರ ಇಳಿಕೆಯಾಗಲಿದೆಯೆನ್ನಲಾಗಿದೆ.

## ರಾಬೆಸ್ಟಾ ಕಾಫಿ ದರ ದಾಖಲೆ ಹೆಚ್ಚಳ

ಜಾಗತಿಕ ಮಾರುಕಟ್ಟೆಯಲ್ಲಿ ರಾಬೆಸ್ಟಾ ಕಾಫಿ ದರ ದಾಖಲೆ ಹೆಚ್ಚಳ ಕಂಡಿದೆಯೆನ್ನಲಾಗಿದೆ. ಪ್ರಮುಖ ರಾಬೆಸ್ಟಾ ಕಾಫಿ ಬೆಳೆಯುವ ದೇಶಗಳಾದ ವಿಯೆಟ್ನಾಂ ಹಾಗೂ ಇಂಡೋನೇಶಿಯಾಗಳಲ್ಲಿ ಎಲ್ ನಿನೋ ಹವಾಮಾನದ ಪ್ರತಿಕೂಲ ಪರಿಣಾಮಗಳಿಂದಾಗಿ ಉತ್ಪಾದನೆ ಗಣನೀಯ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ವಿಯೆಟ್ನಾಂ ನಿಂದ ರಾಬೆಸ್ಟಾ ಕಾಫಿಯ ರಫ್ತೂ ಇಳಿಕೆ ಕಂಡಿದೆ, ರೋಸ್ಟರ್‌ಗಳಿಂದ ಹೆಚ್ಚಿನ ಬೇಡಿಕೆಯೂ ದರ ಹೆಚ್ಚಳಕ್ಕೆ ಕಾರಣವೆನ್ನಲಾಗಿದೆ. ಬ್ರೆಜಿಲ್‌ನಲ್ಲಿ ಅರೆಬಿಕಾ ಕಾಫಿ ಕಟಾವು ನಡೆಯುತ್ತಿದ್ದು, ಒಣ ಹವಾಮಾನವಿರುವ ಹಿನ್ನಲೆಯಲ್ಲಿ ಕಟಾವು, ಸಂಗ್ರಹ ವೇಗ ಪಡೆಯುವ ಅಂದಾಜಿನಿಂದ ದರ ಸ್ವಲ್ಪ ಮಟ್ಟಿನ ಇಳಿಕೆ ಕಂಡಿದೆ. ಹಿಂದಿನ ವಾರ ದಾಖಲೆ ಹೆಚ್ಚಳವಾಗಿದ್ದ ರಾಬೆಸ್ಟಾ ಕಾಫಿ ದರವೂ ಸ್ವಲ್ಪ ಇಳಿಕೆಯಾಗಿದೆಯೆನ್ನಲಾಗಿದೆ. ಪೂರೈಕೆ ಯನ್ನು ಅವಲಂಭಿಸಿ ದರ ಸ್ವಲ್ಪ ಮಟ್ಟಿನ ವ್ಯತ್ಯಾಸಗಳಾಗಬಹುದು. ಆದರ ಒಟ್ಟು ದರ ಹೆಚ್ಚಳದಲ್ಲೇ ಇರುವ ಸಾಧ್ಯತೆಯಿದೆ.